ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 79 ಎಲ್ ಡಬ್ಲ್ಯೂಎ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು ದಿನಾಂಕ: 14.02.2023

# ತಿದ್ದುಪಡಿ

ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 79 ಎಲ್ ಡಬ್ಲ್ಯೂಎ 2022 ದಿನಾಂಕ: 30.11.2022ರಲ್ಲಿ "ಆಯುರ್ವೇದ, ಯೋಗ, ಯುನಾನಿ, ಸಿದ್ಧ, ಹೋಮಿಯೋಪತಿ (ಆಯುಷ್) ಹಾಗೂ ಅಲೋಪತಿಕ್ ಔಷಧಿಗಳ ತಯಾರಿಕೆಯಲ್ಲಿ ಉದ್ಯೋಗ (ಉತ್ಪಾದನೆ, ವಿತರಣೆ ಜಾಹಿರಾತು ವಿಭಾಗಗಳ ಸಹಿತ)" ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಅನ್ವಯವಾಗುವಂತೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿದ್ದು, ಸದರಿ ಅಧಿಸೂಚನೆಯ ಕನಿಷ್ಠ ವೇತನ ಕೋಷ್ಟಕದಲ್ಲಿ ಈ ಕೆಳಕಂಡ ತಿದ್ದುಪಡಿಗಳನ್ನು ಈ ಅಧಿಸೂಚನೆಯ ಮೂಲಕ ಹೊರಡಿಸಲಾಗಿದೆ.

1. ಕುಶಲ ಕಾರ್ಮಿಕರು ವಿಭಾಗಕ್ಕೆ ಸಂಬಂಧಿಸಿದ ವೇತನವು ಕ್ರಮವಾಗಿ ವಲಯ (1) ರಲ್ಲಿ ದಿನಕ್ಕೆ ರೂ. 621.04 ಹಾಗೂ ತಿಂಗಳಿಗೆ ರೂ. 16,147.16 ಗಳೆಂದು ಮತ್ತು ವಲಯ (4) ರಲ್ಲಿ ದಿನಕ್ಕೆ ರೂ. 461.93 ಹಾಗೂ ತಿಂಗಳಿಗೆ ರೂ. 12,010.28 ಗಳೆಂದು ಓದಿಕೊಳ್ಳತಕ್ಕದ್ದು.
2. ಅರೆಕುಶಲ ಕಾರ್ಮಿಕರು ವಿಭಾಗಕ್ಕೆ ಸಂಬಂಧಿಸಿದ ವೇತನವು ಕ್ರಮವಾಗಿ ವಲಯ (1) ರಲ್ಲಿ ದಿನಕ್ಕೆ ರೂ. 614.39 ಹಾಗೂ ತಿಂಗಳಿಗೆ ರೂ. 15,974.13ಗಳೆಂದು ಹಾಗೂ ವಲಯ (4) ರಲ್ಲಿ ದಿನಕ್ಕೆ 456.98 ಹಾಗೂ ತಿಂಗಳಿಗೆ ರೂ. 11,881.58 ಗಳೆಂದು ಓದಿಕೊಳ್ಳತಕ್ಕದ್ದು.

ಉಳಿದಂತೆ ಸದರಿ ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

3700

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ. ಉಮಾದೇವಿ) 14/2/2023
ಪೀಠಾಧಿಕಾರಿ-2,
ಕಾರ್ಮಿಕ ಇಲಾಖೆ (ಕನಿಷ್ಠ ವೇತನ)

ಇವರಿಗೆ: ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಈ ಅಧಿಸೂಚನೆಯನ್ನು ಇ-ರಾಜ್ಯಪತ್ರ (E-Gazette) ದಲ್ಲಿ ಪ್ರಕಟಿಸಲು ಕೋರಲಾಗಿದೆ.

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ (ಕಾರ್ಮಿಕ ಆಯುಕ್ತರ ಮೂಲಕ)
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಗಳ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು (ಕಾರ್ಮಿಕ ಆಯುಕ್ತರ ಮೂಲಕ)
4. ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ವಾರ್ತಾ ಭವನ, ಇನ್ ಫೆಂಟ್ರಿ ರಸ್ತೆ, ಬೆಂಗಳೂರು.
5. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ, ಕಾರ್ಮಿಕ ಭವನ, ಬೆಂಗಳೂರು (ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಎಲ್ಲಾ ಸದಸ್ಯರ ಗಮನಕ್ಕೆ ತರುವುದು).
6. ಎಲ್ಲಾ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳಿಗೆ (ಕಾರ್ಮಿಕ ಆಯುಕ್ತರ ಮೂಲಕ)
7. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು

ಪ್ರತಿಗಳು:

1. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸಸೌಧ, ಬೆಂಗಳೂರು.